ತಾರೀಖು 31ನೆ ಜನವರಿ 1907.

ನಂ. ಜೆ. 2285—ಕೋರ್ಟ್ಸ್ 186-06—2, ಮಿ॥ ವಿ. ಎಸ್. ರಾಜಗೋಪಾಲಾಚಾರ್ಯ ಬಂದು ತಿಂಗಳ ಪ್ರಿವಿಲೇಜ್ ರ ಜಾವೇಲಿ ಇರುವಾಗ ಕೃಷ್ಣರಾಜಪೇಟೆ ತಾಲ್ಲೂಕಿನ ಚಾರ್ಜಿನಲ್ಲಿ ಇಡಲ್ಪಟ್ಟಿರುವ ಸದರಿ ತಾಲ್ಲೂಕಿನ ಸಿರಸ್ತೆದಾರ್ ಕೆ. ಎಸ್. ರಾಮಚಂದ್ರಯ್ಯನವರಿಗೆ, ಕ್ರಿಮಿನಲ್ ಪ್ರೊಸೀಜ್ಯುರ್ ಕೋಡಿನ 12ನೆ ಪ್ರಕರಣದ ಮೇರೆಗೆ ಮೂರನೆ ಶರಗತಿಯ ಮಾಜಿಸ್ಟ್ರೇಟಿನ ಅಧಿಕಾರಗಳನ್ನು, ಅವರು ಆ ತಾಲ್ಲೂಕಿನ ಚಾರ್ಜಿನಲ್ಲಿರುವ ವರೆಗೆ ನಡೆಸತಕ್ಕ ಬಗ್ಗೆ, ಕೊಟ್ಟಿರುತ್ತದೆ.

ತಾರೀಖು 31ನೆ ಜನವರಿ 1907.

ನಂ. ಜೆ. 4785—ಜಿ. ಎಂ. 243-06-2, ಸರ್ವ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಕಟಿಸುವುದೇನಂದರೆ:—ಅನ್ಯ ದೇಶಗಳಲ್ಲಿ ವಾಸಮಾಡುವ ಬ್ರಿಟಿಷ್ ಪ್ರಜೆಗಳು, ತಾವು ಬ್ರಿಟಿಷ್ ಪ್ರಜೆಗಳೆಂಬದಾಗಿ ಬ್ರಿಟಿಷ್ ಕಾನ್ಸುಲೇಟುಗಳಲ್ಲಿ ರಿಜಿಸ್ಟ್ರ್ಯಾಡಿಸಿಕ್ಕೊಳ್ಳೋಣದರ ಆವಶ್ಯಕತೆಯನ್ನು ಅವರಿಗೆ ಖಚಿತವಾಗಿ ತಿಳಿಯುಪಡಿಸುವುದು ಅವಶ್ಯಕವಾಗಿ ಎಣಿಸಲ್ಪಟ್ಟಿದೆ, ಮತ್ತು ಇಂಡಿಯಾ ಸರ್ಕಾರದ ಮೂಲಕ ಬಂದ ಶ್ರೀಮರ್ ಇಂಡಿಯಾ ಚಕ್ರವರ್ತಿಯವರ ಸೆಕ್ರೆಟರಿ ಆಫ್ ಸ್ಟೇಟ್ ರವರ ಅಪ್ಪಣೆ ಮೇರೆಗೆ, ಅನ್ಯ ದೇಶಗಳಿಗೆ ಹೋಗುವ ಬ್ರಿಟಿಷ್ ಇಂಡಿಯಾ ದೇಶೀಯರು ತಾವು ವಾಸಮಾಡುವ ಅನ್ಯ ದೇಶಗಳ ಕಾನ್ಸುಲೇಟುಗಳಲ್ಲಿ ಬ್ರಿಟಿಷ್ ಪ್ರಜೆಗಳೆಂದು ರಿಜಿಸ್ಟ್ರ್ಯಾಡಿಸಲ್ಪಡಲು ಕಷ್ಟವಾಗದೆ ಇರುವುದಕ್ಕಾಗಿ ರಹದಾರಿಗಳನ್ನು ಪಡೆದುಕೊಳ್ಳತಕ್ಕದ್ದೆಂದು ಆಜ್ಞಾಪಿಸಿದೆ.

ತಾರೀಖು 6ನೆ ಫೆಬ್ರವರಿ 1907.

ನಂ. 6905—ಮ್ಯುನಿಸಿಪಲ್—324-05—9, ವಜಾ ಮಾಡಲ್ಪಟ್ಟ ರಾಮಕೃಷ್ಣಪ್ಪನವರಿಗೆ ಬದಲಾಗಿ ಪಡಿಗೇನಹಳ್ಳಿಯ ಮ್ಯುನಿಸಿಪಲ್ ಸಭೆಗೆ, ವರ್ತಕ ಮಿ॥ ನಂದಿ ಗಿರಿಯಪ್ಪ ಬಿ.ಎ ರುದ್ರಪ್ಪನವರನ್ನು ಸಭಿಕರನ್ನಾಗಿ ನೇಮಕ ಮಾಡಿದೆ.

ತಾರೀಖು 26ನೆ ಜನವರಿ 1907.

ನಂ. ಫೈ. 5807—ಜ. ಫೈ. 161-06—2, ಮೈಸೂರು ಶ್ರೀಮರ್ ಮಹಾರಾಜರವರ ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಂಚರ್ ಸೆಕ್ರೆಟರಿ, ಮಿ॥ ಪಿ. ಜೆ. ಡಿಸೋಜಾ ಯವರು 1906ನೆ ಇಸವಿಯ ಡಿಸೆಂಬರ್ 22ನೆ ತಾರೀಖಿನ ಆರ್. 6299-ಎಲ್. ಆರ್. 256-06—3ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ತಮಗೆ ಕೊಡಲ್ಪಟ್ಟ 15 ದಿವಸಗಳ ಪ್ರಿವಿಲೇಜು ರಜಾದಲ್ಲಿ 10 ದಿವಸಗಳನ್ನು ಪವಿತ್ರನೇ ಕ್ರಿಸ್ತಮಸ್ ರಜಾದ ಜತೆಯಲ್ಲಿ ಉಪಯೋಗಿಸಿಕೊಂಡು 1907ನೆ ಇಸವಿಯ ಜನವರಿ 13ನೆ ತಾರೀಖಿನ ಪೂರ್ವಾಹ್ನದಿಂದ ಕೆಲಸದ ಮೇಲೆ ವಾಪಸು ಹಾಜರಾಗಿರುವುದರಿಂದ ಅವರು ಉಪಯೋಗಿಸಿಕೊಳ್ಳದೆ ಉಳಿದ ರಜಾವನ್ನು ಎಂದರೆ 5 ದಿವಸಗಳ ರಜಾವನ್ನು ಇದರಿಂದ ವಜಾಮಾಡಿ ಇದೆ.

ತಾರೀಖು 28ನೆ ಜನವರಿ 1907.

ನಂ. 6694—ಮ್ಯುನಿಸಿ. 368-06—4, ಸ್ ೧೮೯೪ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನು ನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:—ಇದರಡಿ ವಿವರಿಸಲ್ಪಟ್ಟ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಸಕಲೇಶಪುರ ಮ್ಯುನಿಸಿಪಾಲಿಟಿಯಲ್ಲಿ ಕಚೇರಿ ಬಂಡಿಗಳು ತಿರುಗಾಡುವುದಕ್ಕೆ ಒಂದು ಟೋಪಿ ನಾಡುವುದಕ್ಕೋಸ್ಕರ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನು ನುಸರಿಸಿ ಸಕಲೇಶಪುರ ಸಬ್ ಡಿವಿಜನ್ನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರೀ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ:—

ಜಿಲ್ಲೆ.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಸರ್ವೆ ನಂಬರು.	ಹಿಂಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಗಡಿ.			
							ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಹಾಸನ.	ಸಂಪಗಾಂಬುದು.	ಹಸಬೂ ಸಕಲೇಶಪುರ.	ಸಕಲೇಶಪುರ ಮ್ಯುನಿಸಿಪಾಲಿಟಿ.	ಸಕಲೇಶಪುರದ ಮಹಜನದ ಹೆಸರಿನ ಸರ್ಕಾರ ಅಮ್ಮಲ್ಡಿ ಅಜೀಜ್.	ಸಂತೆ ಮೈದಾನಕ್ಕೆ ಉಪಯೋಗಿಸುತ್ತಿರುವ ಖಾಲಿ ನಿವೇಶನ.	ಎ. ಮುಂಭಾಗ $10 \times 6 = 60$ ಚದರ ಗಜಗಳು. ಬಿ. ಹಿಂಬಾಗ $10 \times 3 = \frac{30}{90}$ ಚದರ ಗಜಗಳು.	ಶೇಕಂಠಯ್ಯನ ಮನೆ. ಅಮ್ಮಲ್ಡಿ ಅಜೀಜನ ಮನೆ.	ಅಮ್ಮಲ್ಡಿ ಅಜೀಜನ ಮನೆ. ಹಸೇನಿ ಸಾಹೆಬರು ಮನೆ.	ಖಾಲಿ ನಿವೇಶನ. ಡಿಟ್ಟೋ	ಬೀಲೂರು ಮುಂಭಾಗದ ರಸ್ತೆಯು ಉಂಟಿ ನಂತರ ಸರ್ಕಾರಕ್ಕೆ ಉಳಿಸಿಕೊಂಡಿರುವ ಜಮೀನು. ಡಿಟ್ಟೋ

ತಾರೀಖು 19ನೆ ಜನವರಿ 1907.

ನಂ. ರೆ. 6946—ಲ್ಯಾ. ರೆ. 225-06-6, ಸ್ ೧೯೦೭ನೆ ಇಸವಿಯ ಜನವರಿ ಮೊದಲನೆ ತಾರೀಖಿನಿಂದ ಮಿ॥ ಎಂ. ಚಂಗಯ್ಯ ಶೆಟ್ಟರನ್ನು 3ನೆ ತರಗತಿಯ ಡೆಪ್ಯುಟಿ ಕಮಿಷನರಾಗಿ ಖಾಯಂಮಾಡಿದೆ.